**ದಿನಾಂಕಃ 15.11.2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಹೆಚ್ ಟಿ ವಕೀಲರಿಂದಃ-**

ಪ್ರತಿವಾದಿಯು ನನಗೆ 10-12 ವರ್ಷದಿಂದ ಪರಿಚಯ. ಪ್ರತಿವಾದಿಯು ಪರಿಶಿಷ್ಟ ಜಾತಿಯ ಭೋವಿ ಜನಾಂಗಕ್ಕೆ ಸೇರಿದವರು ಎಂದರೆ ಸರಿ. ಪ್ರತಿವಾದಿಯು ನನ್ನ ವಿರುದ್ದ ಪರಿಶಿಷ್ಟ ಜಾತಿ ಮತ್ತು ಪಂಗಡದ ಆಯೋಗಕ್ಕೆ ದೂರು ಸಲ್ಲಿಸಿರುವ ವಿಚಾರ ನನಗೆ ಗೊತ್ತು. ಸದರಿ ದೂರಿನ ಮೇಲೆ ನನಗೆ ಪತ್ರ ಬಂದಿರುತ್ತದೆ ಅದಕ್ಕೆ ನಾನು ಪ್ರತ್ಯುತ್ತರ ನೀಡಿರುತ್ತೇನೆ. ನಾನು ಆ ರೀತಿ ಉತ್ತರ ನೀಡಿರುವ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನಾನು ಪ್ರತಿವಾದಿಯ ಆಸ್ತಿಗೆ ತೊಂದರೆ

ನೀಡುತ್ತಿದ್ದೇನೆ ಎಂದು ಪತ್ರ ಬಂದಿತ್ತು ಎಂದರೆ ಸರಿ. ಪೋಲಿಸ್ ಅಧೀಕ್ಷಕರು ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ ಮಂಗಳೂರು ಇವರಿಂದ ಪತ್ರ ಬಂದಿತ್ತು ಎಂದರೆ ಸರಿ, ಆ ಪತ್ರಕ್ಕೆ ಉತ್ತರ ನೀಡಿರುತ್ತೇನೆ. ನಾನು ಆ ರೀತಿ ಉತ್ತರ ನೀಡಿದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿರುವುದಿಲ್ಲ. ಪೋಲಿಸ್ ಅಧೀಕ್ಷಕರು ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ ಮಂಗಳೂರು ಇವರು ನೀಡಿದ ಪತ್ರದ ಆಧಾರದ ಮೇರೆಗೆ ಕಡೂರು ಪುರಸಭೆಯವರು ಪ್ರತಿವಾದಿಯ ಸ್ವತ್ತನ್ನು ಅಳತೆ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮ್ಮ ಸ್ವತ್ತನ್ನೂ ಸಹ ಆ ಸಮಯದಲ್ಲಿ ಅಳತೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಪುರಸಭೆಯವರು ನಮ್ಮ ಸ್ವತ್ತನ್ನು ಪ್ರತಿವಾದಿಯು ಒತ್ತುವರಿ ಮಾಡಿರುವುದಿಲ್ಲ ಎಂದು ವರದಿ ಸಲ್ಲಿಸಿರುತ್ತಾರೆ ಎಂದರೆ ಸರಿ.

ಟಿ ಸಿ ಗೋವಿಂದರಾಜು ರವರಿಗೆ ಪ್ರತಿವಾದಿಯು ಅವರ ಸ್ವತ್ತನ್ನು ಒತ್ತುವರಿ ಮಾಡಿಕೊಳ್ಳುತ್ತಿರುವ ಬಗ್ಗೆ ದೂರವಾಣಿ ಮೂಲಕ ತಿಳಿಸಿರುವುದಿಲ್ಲ. ಟಿ ಸಿ ಗೋವಿಂದರಾಜು ಪ್ರತಿವಾದಿ ವಿರುದ್ದ ಓ ಎಸ್ 74ಃ2010 ರಂತೆ ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ಟಿ ಸಿ ಗೋವಿಂದರಾಜು ರವರ ಪರ ಹಾಗೂ ಪ್ರತಿವಾದಿಯ ವಿರುದ್ದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿ. ಸದರಿ ದಾವೆಯು ವಜಾ ಗೊಂಡಿರುತ್ತದೆ ಎಂದರೆ ಸರಿ. ಈ ದಾವೆಯನ್ನು ಪ್ರತಿವಾದಿಗಳ ವಿರುದ್ದ ದಾವಾ ಆಸ್ತಿಯನ್ನು ಒತ್ತುವರಿ ಮಾಡಿರುವ ಬಗ್ಗೆ ದಾಖಲಿಸಿರುತ್ತೇನೆ. ಪ್ರತಿವಾದಿ ದಾವಾ ಆಸ್ತಿಯಲ್ಲಿ 8 ಅಡಿ ಅಗಲದ ಆಸ್ತಿಯನ್ನು ಒತ್ತುವರಿ ಮಾಡಿರುತ್ತಾರೆ. ಈ ವಿಚಾರವನ್ನು ನನ್ನ ವಕೀಲರಿಗೆ ನಾನು ತಿಳಿಸಿರುತ್ತೇನೆ. ದಾವಾ ಆಸ್ತಿಯಲ್ಲಿ ಯು ಬಿ ರಸ್ತೆಗೆ ಎಷ್ಟು ಅಡಿ ಸ್ವಾದೀನಪಡಿಸಿಕೊಂಡಿರುತ್ತಾರೆ ಎಂದು ಹೇಳಬಹುದಾ ಎಂದರೆ ಸಾಕ್ಷಿಯು ಯು ಬಿ ರಸ್ತೆಗೆ ಸ್ವತ್ತನ್ನು ವಶಪಡಿಸಿಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಪಶ್ಚಿಮ ಭಾಗಕ್ಕೆ ಇರುವ ಪುರಸಭಾ ರಸ್ತೆಗೆ 15 ಅಡಿ ಅಗಲ ಜಾಗ ಬಿಟ್ಟಿರುತ್ತೇವೆ. ದಾವಾ ಆಸ್ತಿಯ ದಕ್ಷಿಣ ಭಾಗಕ್ಕೆ ಎಷ್ಟು ಅಡಿ ಆಸ್ತಿ ಇದೆ ಎಂದರೆ ಒಟ್ಟು 12 ಅಡಿ ಅಗಲ ಮತ್ತು 55 ಅಡಿ ಉದ್ದ ಆಸ್ತಿ ಇರುತ್ತದೆ. ಖಾಲಿ ಜಾಗವನ್ನು ನಾವು 2019 ರಲ್ಲಿ ಅಳತೆ ಮಾಡಿಸಿರುತ್ತೇನೆ. ಅಳತೆ ಮಾಡಿಸಿರುವ ಬಗ್ಗೆ ನಾನು ದಾಖಲೆಗಳನ್ನು ಪಡೆದಿರುತ್ತೇನೆ. ಸದರಿ ದಾಖಲೆಗಳನ್ನುನನ್ನ ವಕೀಲರಿಗೆ ಆಗಲೀ ಅಥವಾ ನ್ಯಾಯಾಲಯಕ್ಕೆ ಹಾಜರುಪಡಿಸಿದ ಬಗ್ಗೆ ನನಗೆ ಈಗ ನೆನಪಿಲ್ಲ. ವಾದ ಪತ್ರದಲ್ಲಿ ಹೇಳಿದಂತೆ ಪ್ರತಿವಾದಿಯು ದಾವಾ ಆಸ್ತಿಗ ತಂಟೆ ತಕರಾರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು ಎಸ್ ಸಿ ಜನಾಂಗದವರು ಎಂಬ ಕಾರಣಕ್ಕೆ ಅವರು ದಾವಾ ಆಸ್ತಿಯನ್ನು ಖರೀದಿಸಿದ ದಿನದಿಂದ ಅವರಿಗೆ ತೊಂದರೆ ನೀಡುತ್ತಾ ಬಂದಿರುತ್ತೇನೆ ಎಂದರೆ ಸರಿಯಲ್ಲ.

ಪ್ರತಿವಾದಿಯು ಹೂಡಿರುವ ಓ ಎಸ್ 615ಃ2018 ಯಾವ ಪರಿಹಾರ ಕೋರಿ ಹಾಕಿರುತ್ತಾರೆ ಎಂದರೆ ನಾವು ಹಾಕಿರುವ ದಾವೆಗೆ ಪ್ರತಿದಾವೆ ಹೂಡಿರುತ್ತಾರೆ ಎಂದು ನುಡಿಯುತ್ತಾರೆ. ಆ ದಾವೆಯಲ್ಲಿ ನಾನು ಏನು ತಕರಾರು ಸಲ್ಲಿಸಿರುತ್ತೇನೆ ಎಂದು ಈಗ ಹೇಳಲಾಗುವುದಿಲ್ಲ. ಪ್ರತಿವಾದಿಯು ದಾವಾ ಆಸ್ತಿಗೆ ಯಾವತ್ತೂ ತೊಂದರೆ ನೀಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ತೊಂದರೆ ನೀಡುವ ಸಲುವಾಗಿ ಸುಳ್ಳು ದಾಖಲೆ ಸೃಷ್ಟಿಸಿ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಕೋರಿರುವ

ಪರಿಹಾರವನ್ನು ಪಡೆಯಲು ನಾನು ಅರ್ಹನಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.